# ದಿನಾಂಕ:05.01.2019ರಂದು ಮಲ್ಲಸಂದ್ರ ವಾರ್ಡ್ ನಂ.13ರಲ್ಲಿ ನಡೆದ ವಾರ್ಡ್ ಸಭೆ ನಡವಳಿಗಳು

ದಿನಾಂಕ:05.01.2019ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಮಲ್ಲಸಂದ್ರ ವಾರ್ಡ್ ನಂ.13ರ ಕಛೇರಿಯಲ್ಲಿ ಮಾನ್ಯ ಶ್ರೀ.ಎನ್.ಲೋಕೇಶ್ ಬಿಬಿಎಂಪಿ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯಲ್ಲಿ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಸಮಿತಿಯ ಕಾರ್ಯದರ್ಶಿ ವಾರ್ಡ್ ನಂ.13ರ ಸಹಾಯಕ ಅಭಿಯಂತರರು ಶ್ರೀ.ವಿ.ಆರ್.ಕೃಷ್ಣಪ್ಪನವರು ಹಾಗೂ ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು ಹಾಗೂ ಆರೋಗ್ಯ ಇಲಾಖೆಯ ಶ್ರೀ.ಶಿವಣ್ಣನವರು ಹಾಗೂ ವಾರ್ಡಿನ ಸಾರ್ವಜನಿಕರು ಭಾಗವಹಿಸಿದರು.

<u>ಸದರಿ ಸಭೆಯಲ್ಲಿ ಈ ಕೆಳಕಂಡತೆ ನಿರ್ಣಯಗಳನ್ನು ಕೈಗೊಳ್ಳಲಾಗಿದೆ</u>

1. ಆರೋಗ್ಯ ಇಲಾಖೆಯಿಂದ ಪ್ರತಿ 15 ದಿನಗಳಿಗೆ ಒಂದು ಬಾರಿ ಫಾಗಿಂಗ್ ಮಾಡಲಾಗುತ್ತಿದ್ದು ಇದರ ಬದಲಾಗಿ ಪ್ರತಿ ವಾರಕೊಮ್ಮೆ ಫಾಗಿಂಗ್ ಮಾಡಲು ಆರೋಗ್ಯ ನಿರೀಕ್ಷಕರಾದ ಶ್ರೀ ಶಿವಣ್ಣನವರಿಗೆ ತಿಳಿಸಲಾಯಿತು.
2. ಬಿಡಬ್ಲ್ಯೂಎಸ್ಎಸ್‌ಬಿರವರು ಪ್ರತಿ ಮನೆಗೆ ನಿಗಧಿ ಪಡಿಸಿದ ಎಂ.ಎಲ್.ಡಿ ಪರಿಮಾಣದ ನೀರನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ ಹಾಗೂ ಒಂದು ವರ್ಷದಿಂದ ಇಚೇಗೆ ಒಂದು ಸಾವಿರ ಮೀಟರ್ ಹೆಚ್ಚುವರಿ ಪೈಪ್‌ಲೈನ್ ನಿರ್ಮಿಸಿರುವುದರಿಂದ ಇನ್ನು ಮುಂದೆ ನಿಗಧಿ ಪಡಿಸಿದ ಎಂ.ಎಲ್.ಡಿ ಪರಿಮಾಣವನ್ನು ಹೆಚ್ಚಿಸಲು ಸೂಚಿಸಲಾಯಿತು.
3. ರವೀಂದ್ರನಗರದಲ್ಲಿ ನೀರು ಕಡಿಮೆ ಬರುತ್ತಿದ್ದು ಈ ಭಾಗದಲ್ಲಿ ಬರುವ ಅನಧಿಕೃತ ಸಂಪರ್ಕವನ್ನು ಸಕ್ರಮಗೊಳಿಸಿ ನೀರಿನ ಪ್ರಮಾಣ ಹೆಚ್ಚಿಸಲು ಬಿಡಬ್ಲ್ಯೂಎಸ್ಎಸ್‌ಬಿ ರವರಿಗೆ ಸೂಚಿಸಲಾಗಿದೆ.
4. ಬಿ.ಹೆಚ್.ಇ.ಎಲ್ ಮಿನಿ ಕಾಲೋನಿ 19ನೇ ಮತ್ತು 20ನೇ ಕ್ರಾಸ್ ಈ ಪ್ರದೇಶದಲ್ಲಿ ನೀರು ಕಡಿಮೆ ಬರುತ್ತಿದ್ದು ಇನ್ನು ಮುಂದೆ ನೀರು ಸರಿಯಾಗಿ ವಿತರಿಸಲು ಸೂಚಿಸಲಾಗಿದೆ.
5. ಮಲ್ಲಸಂದ್ರ ಪ್ರದೇಶದಲ್ಲಿ 5 ಬೋರ್‌ವೆಲ್‌ಗಳು ವಿಫಲಗೊಂಡಿರುತ್ತವೆ ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಟೆಂಡರ್ ಅಂತಿಮಗೊಂಡ ನಂತರ ತಕ್ಷಣ ಬೋರ್‌ವೆಲ್ ಕೊರೆಸಲು ಸೂಚಿಸುವುದಕ್ಕೆ ತಿರ್ಮಾನಿಸಲಾಯಿತು.
6. ಕಲ್ಯಾಣನಗರ ವಾಟರ್ ಮ್ಯಾನ್ ಯತೀಶ್ ವರ್ಗಾವಣೆ ಮಾಡಿದ್ದು ಹೊಸ ವಾಟರ್ ಮ್ಯಾನ್ ಸರಿಯಾದ ರೀತಿಯಲ್ಲಿ ನೀರನ್ನು ವಿತರಣೆ ಮಾಡುತ್ತಿಲ್ಲ ಇದನ್ನು ಸರಿ ಪಡಿಸಲು ಬಿಡಬ್ಲ್ಯೂಎಸ್ಎಸ್‌ಬಿಯವರಿಗೆ ಸೂಚಿಸಲಾಯಿತು.
7. ಏರ್‌ಫೋರ್ಸ್ ಕಾಂಪೊಂಡ್ ಪಕ್ಕದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಪಂಪ್‌ಹೌಸ್ ಪಕ್ಕಕ್ಕೆ ಸ್ಥಳಾಂತರಿಸಲು ಆದೇಶ ಕೋರಿ ಇದರ ವೆಚ್ಚವನ್ನು ಬಿಬಿಎಂಪಿ ಯ

ಯಾವುದಾದರು ಅನುದಾನದಲ್ಲಿ ಬರಿಸಲು ನಿರ್ಣಯಿಸಲಾಯಿತು (ರಸ್ತೆ ಅಗಲಿಕರಣ ಆಗುತ್ತಿರುವುದರಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಳಾಂತರಿಸಬೇಕಾಗಿದೆ)

8. ಬಿಡಬ್ಲ್ಯೂಎಸ್ಎಸ್‌ಬಿಯವರು ರಸ್ತೆ ಅಗೆಯುವುದಕ್ಕೆ ಮುಂಚಿತವಾಗಿ ಬಿಬಿಎಂಪಿಯಿಂದ ಅನುಮತಿ ಪಡೆದುಕೊಳ್ಳುವಂತೆ ಹಾಗೂ ರಸ್ತೆ ಅಗೆದಿರುವುದನ್ನು ಪುನರ್ ನಿರ್ಮಿಸಲು ಸೂಚಿಸಲಾಯಿತು

9. ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾದ ಇಲಾಖೆಗಳ ಮುಖ್ಯಸ್ಥರಿಗೆ ನೋಟೀಸ್ ನೀಡಿ ಸೂಕ್ತಕ್ರಮ ಕೈಗೊಳ್ಳುವಂತೆ ಮಾನ್ಯ ಜಂಟಿ ಆಯುಕ್ತರಲ್ಲಿ ಶಿಫಾರಸ್ ಮಾಡಲು ತಿರ್ಮಾನಿಸಲಾಗಿದೆ. ಇದರಂತೆ 1. ಕಲ್ಯಾಣ ಇಲಾಖೆ 2.ಯೋಜನಾ ವಿಭಾಗ 3.ಘನತ್ಯಜ್ಯ ವಿಲೇವಾರಿ ಇಲಾಖೆ 4. ಬೆಸ್ಕಾಂ ಇಲಾಕೆ 5. ಆರಕ್ಷಕ ನೀರಿಕ್ಷಕರು 6. ಟ್ರಾಫೀಕ್ ಪೋಲೀಸ್ ಹಾಗೂ 7.ಕಂದಾಯಧಿಕಾರಿ ಶೆಟ್ಟಿಹಳ್ಳಿ ಉಪ ವಿಭಾಗ ಇವರಿಗೆ ನೋಟೀಸ್ ನೀಡಲು ತಿರ್ಮಾನಿಸಲಾಯಿತು.

10. ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಹೊಸ ಮನೆ ನಿರ್ಮಾಣ ಮಾಡುತ್ತಿರುವಾಗ ಚರಂಡಿ ಮೇಲೆ ಇರುವ ಸ್ಲಾಬ್‌ಗಳನ್ನು ಮುರಿದು ಹಾಕಿರುವುದು ಕಂಡು ಬಂದಿದೆ ಇವರಿಗೆ ನೋಟೀಸ್ ನೀಡಿ ಸ್ಲಾಬ್‌ಗಳನ್ನು ಮರು ನಿರ್ಮಿಸಲು ಹಾಗೂ ನಿರ್ಮಿಸದೆ ಇದ್ದಲ್ಲಿ ದಂಡ ವಿಧಿಸಲು ತಿರ್ಮಾನಿಸಾಯಿತು.

11. ವಾರ್ಡ್ ವ್ಯಾಪ್ತಿಯಲ್ಲಿ ಖಾಲಿ ನಿವೇಶನದಲ್ಲಿ ಕಸ ಹಾಕಿರುವುದು ಕಂಡು ಬಂದಿದ್ದು ಸದರಿ ನಿವೇಶನದ ಮಾಲೀಕರಿಗೆ ನೋಟೀಸ್ ನೀಡುವುದು ಹಾಗೂ ಸದರಿ ವಿಲೇವಾರಿ ಮಾಡಲು ಕಸ ವಿಲೇವಾರಿ ಘಟಕಕ್ಕೆ ಸೂಚಿಸಲು ತಿರ್ಮಾನಿಸಲಾಯಿತು.

12. ಮಾನ್ಯ ಬಿಬಿಎಂಪಿ ಸದಸ್ಯರ ಅನುದಾನದಲ್ಲಿ ವಾರ್ಡ್ ಕಟ್ಟಡ ನಿರ್ಮಿಸಲಾಗಿದ್ದು ಹಾಲಿ ಸದಸ್ಯರು ಬಾಡಿಗೆ ಕಟ್ಟಡದಲ್ಲಿ ಕಛೇರಿ ನಡೆಸುತ್ತಿರುತ್ತಾರೆ. ಹೊಸ ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು ಮಾನ್ಯ ಶಾಸಕರ ಜೊತೆ ಚರ್ಚಿಸಿ ಸದರಿ ಕಟ್ಟಡವನ್ನು ಉದ್ಘಾಟನೆ ಮಾಡಿಸಲು ತಿರ್ಮಾನಿಸಲಾಯಿತು.

13. ಹಾಲಿ ಟೆಂಡರ್ ಆಗಿರುವ ಕಾಮಗಾರಿಗಳನ್ನು ಮುಂದಿನ ತಿಂಗಳ ವಾರ್ಡ್ ಸಭೆ ನಡೆಸುವುದರೊಳಗಾಗಿ ಗುತ್ತಿಗೆದಾರರಿಗೆ ಕಾರ್ಯದೇಶ ನೀಡುವಂತೆ ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗರವರಿಗೆ ತಿಳಿಸಲು ತಿರ್ಮಾನಿಸಲಾಯಿತು.

14. 2015–16ನೇ ಸಾಲಿನಲ್ಲಿ 6 ಮನೆಗಳು ಹಾಗೂ 2016–17ರಲ್ಲಿ 174 ಮನೆಗಳಿಗೆ ಬಿಬಿಎಂಪಿ ವತಿಯಿಂದ ಕಾರ್ಯದೇಶ ನೀಡಲಾಗಿರುತ್ತದೆ. ಆದರೆ ಇದರಲ್ಲಿ ಕೆಲವರು ಮನೆ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಿದ್ದು ಇನ್ನೂ ಕೆಲವರು ಪ್ರಾರಂಭ ಮಾಡಿರುವುದಿಲ್ಲ ಪ್ರಶಕ್ತ 2018–19ನೇ ಸಾಲಿನ ಬಿಬಿಎಂಪಿ ಆಯವ್ಯಯದಲ್ಲಿ 222 ಮನೆಗಳನ್ನು ನಮ್ಮ ವಾರ್ಡಿನ ಕಂದಾಯ ಪರಿವೀಕ್ಷಕರಿಂದ ಸ್ಥಳ ಪರಿಶೀಲನೆ ಮಾಡಿ ಕೇಂದ್ರ ಕಛೇರಿಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಕಳುಹಿಸಲಾಗಿದೆ ಹಾಗೂ 2017–18ನೇ

ಸಾಲಿನಲ್ಲಿ 40 ಮನೆಗಳು ಮಂಜೂರಾಗಿದ್ದು ಮುಂದಿನವಾರ ಕಾರ್ಯದೇಶ ನೀಡಲಾಗುತ್ತದೆ. ಹಾಗೂ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ 157 ಫಲಾನುಭವಿಗಳಿಗೆ ಮನೆ ನಿರ್ಮಾಣ ಮಾಡುವ ಕಾಮಗಾರಿ ಚಾಲ್ತಿಯಲ್ಲಿರುತ್ತದೆ. ಒಟ್ಟಾಗಿ ನಮ್ಮ ವಾರ್ಡಿಗೆ 601 ಫಲಾನುಭವಿಗಳಿಗೆ ಮನೆ ನಿರ್ಮಾಣ ಕಾರ್ಯಕ್ಕಾಗಿ ಅನುದಾನ ಮಂಜೂರಾಗಿರುತ್ತದೆ. ಮತ್ತು ನಮ್ಮ ಕಛೇರಿಗೆ ಹಾಲಿ 250 ಫಲಾನುಭವಿಗಳ ಅರ್ಜಿಗಳು ಬಂದಿದ್ದು ಹಾಗೂ ದಾಸರಹಳ್ಳಿ ವಲಯ ಕಛೇರಿಗೆ 225 ಅರ್ಜಿಗಳು ಬಂದಿರುತ್ತದೆ. ನಮ್ಮ ಕಛೇರಿಗೆ ಬಂದಿರುವ ಫಲಾನುಭವಿಗಳ ಅರ್ಜಿಗಳನ್ನು ದಾಸರಹಳ್ಳಿ ವಲಯದ ಕಲ್ಯಾಣಧಿಕಾರಿಗೆ ನೀಡಲಾಗಿದ್ದು ಒಟ್ಟು 475 ಫಲಾನುಭವಿಗಳ ಅರ್ಜಿಗಳನ್ನು ಪರಿಶೀಲಿಸಿ ಈಗಾಗಲೇ ಕೊಟ್ಟಿರುವ 601 ಫಲಾನುಭವಿಗಳಲ್ಲಿ ಪುನಾರವರ್ತನೆಯಾಗದೆ ಆಯ್ಕೆ ಮಾಡಿ ಒಂದು ಪಟ್ಟಿಯನ್ನು ಸಿದ್ದಪಡಿಸಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅನುಮೋದನೆಗೆ ಮಂಡಿಸಿ ಬಿಬಿಎಂಪಿ ಕೇಂದ್ರ ಕಛೇರಿಗೆ ಕಳುಹಿಸಲು ಈ ಮೂಲಕ ಸೂಚಿಸಿದೆ.

05/1/2019

ಕಾರ್ಯದರ್ಶಿ ಮತ್ತು ಸಂಚಾಲಕರು ಹಾಗೂ
ವಾಡ್ ಸಂಖ್ಯೆ.13 ಕಿರಿಯ ಅಭಿಯಂತರರು
ಶೆಟ್ಟಿಹಳ್ಳಿ ಉಪವಿಭಾಗ, ದಾಸರಹಳ್ಳಿ ವಲಯ
ಬಿಬಿಎಂಪಿ, ಬೆಂಗಳೂರು.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಶ್ರೀ ಎನ್. ಲೋಕೇಶ್, ಬಿಬಿಎಂಪಿ ಸದಸ್ಯರು, ವಾರ್ಡ್ ಸಂಖ್ಯೆ 13, ಮಲ್ಲಸಂದ್ರ, ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ), ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ದಾಸರಹಳ್ಳಿ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ. ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
8. ಕಲ್ಯಾಣಾಧಿಕಾರಿಗಳು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.

9. ಆರಕ್ಷಕ ನಿರೀಕ್ಷಕರು, ಬಾಗಲಗುಂಟೆ ಪೋಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಉಪ ಆರೋಗ್ಯಧಿಕಾರಿಗಳು. ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪವಿಭಾಗ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
12. ಸಹ ಕಂದಾಯ ಅಧಿಕಾರಿ, ಶೆಟ್ಟಿಹಳ್ಳಿ ಉಪವಿಭಾಗ, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
13. ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ/ಕಛೇರಿ ಪ್ರತಿ.